
# ‘ಚೆನ್ನುಡಿ ಚಿಲುಮೆ’ ಸಂಕಲನ

ಮೈಸೂರು ಆಕಾಶವಾಣಿಯಲ್ಲಿ ಪ್ರಚಾರವಾಗುತ್ತಿದ್ದ **‘ಚೆನ್ನುಡಿ’**ಯಲ್ಲಿ ಪ್ರೊ. ಕೆ.ಬಿ. ಪ್ರಭುಪ್ರಸಾದ್ ಅವರು ನೀಡಿದ ಕಿರುಭಾಷಣಗಳ ಸಂಕಲನವೇ ‘ಚೆನ್ನುಡಿ ಚಿಲುಮೆ’ ಎಂಬ ಹೆಸರಿನಲ್ಲಿ ಈಗ ಪ್ರಕಟವಾಗಿದೆ. ತೊಂಬತ್ತರ ಹತ್ತಿರದಲ್ಲಿರುವ ಲೇಖಕರ ಸಮೃದ್ಧ ಜೀವನದ ಕುಲುಮೆಯಲ್ಲಿ ಪುಟಗೊಂಡ ವಿಚಾರಗಳ ದೀಪ್ತ ಅಭಿವ್ಯಕ್ತಿ ಈ ಚಿಂತನೆಗಳಲ್ಲಿವೆ. ಲೇಖಕರೇ ತಿಳಿಸಿರುವಂತೆ ಅದೇ ‘ಚೆನ್ನುಡಿ’ ಈಚೆಗೆ ‘ಚಿಂತನ’ವಾಗಿ ಪ್ರಸಾರಗೊಳ್ಳುತ್ತಿದೆ. ‘‘ಕೇವಲ ನಾಲ್ಕು ನಿಮಿಷಗಳಲ್ಲಿ ಒಂದು ಆಲೋಚನೆಯ ಸುತ್ತ ಹೊಮ್ಮುವ ಚಿಂತನವನ್ನು ಕೇಳುವವರ ಕಿವಿಗಳಿಗೆ ಹಾಕಿ, ಅವರ ಬುದ್ಧಿ-ಮನಸ್ಸುಗಳನ್ನು ಸಕ್ರಿಯಗೊಳಿಸುವುದು ಇದರ ಉದ್ದೇಶ’’ ಎಂದು ಅವರು ಈ ಗ್ರಂಥದ ಮುನ್ನುಡಿಯಲ್ಲಿ ವಿವರಿಸುತ್ತಾರೆ. ಹೀಗೆ ಸೀಮಿತ ಅವಧಿಯ ಕಾರ್ಯಕ್ರಮವಾಗಿ ರೂಪುಗೊಂಡ ‘ಚೆನ್ನುಡಿ’ಗಳನ್ನಿಲ್ಲಿ ಬರಹ ರೂಪಕ್ಕಿಳಿಸಿ, ಕಾಲಾತೀತವಾಗಿಸಿದ್ದಾರೆ ಲೇಖಕರು!




ಈ ಸಂಕಲನದಲ್ಲಿ ೧೩೮ ‘ಚೆನ್ನುಡಿ’ಗಳನ್ನು ಸಂಗ್ರಹಿಸಿ, ಆಕಾರಾದಿಯಾಗಿ ಜೋಡಿಸಲಾಗಿದೆ. ಇಲ್ಲಿನ ವಿಷಯಗಳು ವೈವಿಧ್ಯ, ಬದುಕಿನ ಎಲ್ಲ ಮಗ್ಗಲುಗಳನ್ನೂ ವ್ಯಾಪಿಸಿ, ಒಂದೊಂದೇ ಸಣ್ಣ ಸಣ್ಣ ಚಿಂತನೆಯ ತುಣುಕುಗಳಾಗಿ ಮಾರ್ಪಟ್ಟಿವೆ. ‘ಅಲಕ್ಷಿತ ಸಂಪತ್ತು’ (ಮಹಿಳೆಯರ ಏಳಿಗೆ ಬಗ್ಗೆ), ‘ಆಪದ್ಧರ್ಮ’, ‘ತೋರಿಕೆ ಏಕೆ?’, ‘ಆನಂದದ ಗುಟ್ಟು’, ‘ಮನಶ್ಶುದ್ಧಿ’, ‘ಸರಸ್ವತಿ ಪೂಜೆ’, ಬಾಳ ಗಂಗಾಧರ ತಿಲಕ್’... ಇವು ಕೆಲವು ‘ಚೆನ್ನುಡಿ’ಗಳು. ನವಿರು ಹಾಸ್ಯ, ವ್ಯಂಗ್ಯ, ಗಂಭೀರ ಚಿಂತನೆ, ಪ್ರಸ್ತುತ ವಿದ್ಯಮಾನ, ನೈತಿಕತೆ, ಬೋಧಪೂರ್ಣ ಕಿರುಗತೆಗಳು, ಗಾದೆ-ನುಡಿಗಟ್ಟು, ಸೂಕ್ತಿ-ಕವಿತೆಗಳ ಸಾಲುಗಳು — ಇವೆಲ್ಲ ಅಂಶಗಳಿಂದ ಈ ಚೆನ್ನುಡಿಗಳು ಜೀವಂತವಾಗಿವೆ. ಲೇಖಕರೇ ಹೇಳಿದಂತೆ, ‘‘ಹತ್ತಿರ ಹತ್ತಿರ ಎರಡು ಮೂರು ದಶಕಗಳಿಂದ ಬೇರೆ ಬೇರೆ ದಿನಗಳಲ್ಲಿ ಪ್ರಸಾರವಾಗಿರುವ ಕಾರಣ, ಒಂದೊಂದು ಚಿಂತನದಲ್ಲಿ ಬರುವ ಅದೇ ಉದಾಹರಣೆಗಳು ಇಲ್ಲವೆ ಉಲ್ಲೇಖಗಳು ಮತ್ತೆ ಮತ್ತೆ ಬಂದು ಏಕತಾನತೆಯ ಬೇಸರ ತರಬಹುದು. ಆದ್ದರಿಂದ ಈ ಬರಹಗಳನ್ನು ಕಥೆ ಕಾದಂಬರಿ ಓದಿದಂತೆ ಒಂದೇ ಸಮನೆ ಓದಲು ಹೋಗಬಾರದು. ಒಂದೋ ಎರಡೋ ಚಿಂತನಗಳನ್ನು ಓದಿ ನಿಲ್ಲಿಸಿ ಮತ್ತೆ ಯಾವಾಗಲೋ ಮುಂದಿನ ಲೇಖನ ಓದಬೇಕು.’’ ಈ ಬಗೆಯ ಬರಹಗಳನ್ನು ಹೇಗೆ ಓದಿದರೆ ಸೂಕ್ತ ಎಂದು ಲೇಖಕರೇ ನಿರ್ದೇಶಿಸಿದ್ದಾರೆ. ಹತ್ತು ಹಲವು ಭಾವನೆ, ವಿಚಾರ, ಸಂಗತಿಗಳ ಸಂಕಲನವಾದ್ದರಿಂದ ಇವುಗಳಲ್ಲಿ ಒಂದು ಏಕಸೂತ್ರತೆ ಅಥವಾ ಮುಂದುವರಿಯುವಿಕೆ ಅಸಾಧ್ಯ; ಅದನ್ನು ನಾವು ನಿರೀಕ್ಷಿಸಲೂಬಾರದು. ಆದ್ದರಿಂದ ಈ ಚಿಂತನೆಗಳು ಬಿಡಿಬಿಡಿಯಾದ ಮಲ್ಲಿಗೆ ಹೂವಿನಂತೆ; ಹೆಣೆದ ಮಾಲೆಯಂತಲ್ಲ. ಪ್ರತಿಯೊಂದೂ ಅವುಗಳ ಸ್ಥಾನದಲ್ಲೇ ನವಿರು ಸುಗಂಧವನ್ನು ಬೀರುತ್ತಿವೆ.

*ಕೃತಿ :* **ಚೆನ್ನುಡಿ ಚಿಲುಮೆ**
*ಲೇಖಕರು :* **ಪ್ರೊ. ಕೆ.ಬಿ. ಪ್ರಭುಪ್ರಸಾದ್**
*ಪ್ರಕಾಶಕರು :* **ಸಂವಹನ, 12/1ಎ ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು - 570 001**
*ಪುಟಗಳು :* **416**
*ಬೆಲೆ :* **325 ರೂ.**

ಇಲ್ಲಿನ ಶೈಲಿಯ ಬಗ್ಗೆ ಒಂದು ಮಾತನ್ನು ಹೇಳುವುದು ಸೂಕ್ತ. ಆಡುಮಾತಿನ ನೇರನುಡಿಯ ಸಹಜ-ಸರಳ ಶೈಲಿ ಎಲ್ಲ ಚಿಂತನೆಗಳ ಸಾಮಾನ್ಯ ಧಾಟಿಯಾಗಿದ್ದರೂ, ನಡುನಡುವೆ ಕೆಲವು ಮನಮೋಹಕವಾದ ಭಾಷೆ ಗಮನಸೆಳೆಯುತ್ತವೆ. ಉದಾಹರಣೆಗೆ, ‘ದೇವರು ಎಲ್ಲಿದ್ದಾನೆ?’ ಎಂಬ ಬರಹದ ನಾಲ್ಕು ಸಾಲುಗಳು: ‘‘ಒಮ್ಮೆ ದೇವಸ್ಥಾನಕ್ಕೆ ಹೋದೆ ದೇವರ ದರ್ಶನಕ್ಕೆ. ಅಲ್ಲಿ ದೇವರ ವಿಗ್ರಹ ಇತ್ತು. ಆದರೆ ಅದು ದೇವರು ಎಂಬ ಭಾವವಾಗಲಿ, ಭಕ್ತಿಯಾಗಲಿ ಉಂಟಾಗಲಿಲ್ಲ. ದೇವರು ಕಾಣಲಿಲ್ಲವಲ್ಲ ಎಂದು ವಿಮುಖನಾಗಿ ಹೊರಟೆ. ಅಲ್ಲೊಬ್ಬ ಜೀರ್ಣ-ಶೀರ್ಣವಾದ ಬಟ್ಟೆ ಹಾಕಿಕೊಂಡ ಬಡಕಲು ಶರೀರದ ಹೆಂಗಸೊಬ್ಬಳು ನಿಂತಿದ್ದಳು, ದೇವರಿಗಭಿಮುಖವಾಗಿ. ಆಕೆಯ ಅರೆತೆರೆದ ಕಣ್ಣುಗಳಲ್ಲಿ ಭಕ್ತಭಾವ ತುಳುಕುತ್ತಿತ್ತು. ಪ್ರಸನ್ನತೆ ಬೆಳಗುವ ಮುಖದಲ್ಲಿ ಆನಂದದ ಮಂದಹಾಸವನ್ನು ನೋಡಿದೆ. ಮೈ ರೋಮಾಂಚನಗೊಂಡಿತು. ದೇವರ ದರ್ಶನದ ಅನುಭವವಾಯಿತು.’’(ಪು. ೧೯೧) ಇದು ಲೇಖಕರ ವರ್ಣನೆಯ ರೀತಿ. ಲೇಖಕರು ಬದುಕನ್ನು ನೋಡುವ ಬಗೆ ಇಂಥ ಮಾತುಗಳಲ್ಲಿ ವ್ಯಕ್ತವಾಗಿದೆ.

ಸುಸಂಸ್ಕೃತ ಜೀವನದ ಹಲವು ಸನ್ನಿವೇಶಗಳಲ್ಲಿ ಮೂಡಿ ಮಾಯವಾಗುವ ಹಲವು ಭಾವನೆ-ಚಿಂತನೆಗಳಿಗೆ ಅಭಿವ್ಯಕ್ತಿ ನೀಡಿ, ಅದನ್ನು ಜನತೆಯೊಂದಿಗೆ ಹಂಚಿಕೊಳ್ಳುವವರು ಕಡಿಮೆ. ಇಂಥ ಅಭಿವ್ಯಕ್ತಿಗಳ ಸಂಗ್ರಹವನ್ನು ಓದಿ, ಮೆಲಕುಹಾಕಿ, ಕೆಲವು ಕ್ಷಣ ಇಂಥ ವಿಚಾರಗಳನ್ನು ಕುರಿತು ಚಿಂತಿಸುವ ಓದುಗರು ಇನ್ನೂ ಕಡಿಮೆ. ಆದರೆ ಈ ಬಗೆಯ ಸಂಕಲನಗಳು ಹಲವು ಸಂಗತಿಗಳನ್ನು ಸ್ಫುಟಗೊಳಿಸುತ್ತವೆ; ಬದುಕಿನ ನೋವು-ನಲಿವುಗಳ ನಡುವೆ ಅಪೂರ್ವ ಸ್ಮೃತಿಚಿತ್ರಗಳಾಗಿ ಉಳಿಯುತ್ತವೆ. ಆಕರ್ಷಕ ರಕ್ಷಾಪುಟ, ಮುದ್ರಣಗಳೊಂದಿಗೆ ಪ್ರಕಟವಾಗಿರುವ ಈ ಕೃತಿ ಬಿಡುವಿನ ವೇಳೆ ಓದಿ ಆನಂದಿಸಬಹುದಾದ ಒಂದು ಉತ್ತಮ ರಚನೆಯಾಗಿದೆ.